5C.R.P.67
Form No.4 (Civil)
Deposition Sheets
(R.P.No.57)

<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ. 73/2022</u>

<u>ದಿನಾಂಕ ಃ 20.06.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ</u>.

ಸಿ. ಡಬ್ಲ್ಯೂ: 5 ಪಿ. ಡಬ್ಲ್ಯೂ:6

| | |
|---|---|
| ಸಾಕ್ಷಿದಾರರ ಹೆಸರು | ಮಲ್ಲಿಕಾ |
| ಗಂಡನ ಹೆಸರು | ಕಂಚಿನಿಂಗಯ್ಯ |
| ವಯಸ್ಸು | 55 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ವಡ್ಡರಹಳ್ಳಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು ಹುಟ್ಟಿದಾಗಿನಿಂದ ವಡ್ಡರಹಳ್ಳಿಯಲ್ಲಿ ವಾಸವಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಪಕ್ಕದ ಮನೆಯವರು. ಸುಮಾರು 20 ವರ್ಷಗಳಿಂದ ಅವರು ನಮ್ಮ ಪಕ್ಕದ ಮನೆಯಲ್ಲಿ ವಾಸವಿರುತ್ತಾರೆ. ಸುಮಾರು 7 ರಿಂದ 8 ವರ್ಷಗಳ ಹಿಂದೆ 1 ನೇ ಆರೋಪಿಯ ಮದುವೆಯು, ಬೆಳಕವಾಡಿಯ ಕಿರಗಸೂರು ಗ್ರಾಮದ ಹುಡುಗಿಯೊಂದಿಗೆ ಮದುವೆಯಾಗಿದ್ದು, ಆಕೆಯ ಹೆಸರು ಮಧು ಎಂದು ಆಗಿರುತ್ತದೆ. ಸುಮಾರು 4 ವರ್ಷಗಳ ಹಿಂದೆ ಸದರಿ ಮಧು ತೀರಿಕೊಂಡಿರುತ್ತಾರೆ. ಆಕೆ ತೀರಿಕೊಳ್ಳುವ ಸಮಯದಲ್ಲಿ, ಸದರಿ ಆರೋಪಿತರ ಮನೆಯಲ್ಲಿ, ಆರೋಪಿತರು, ಮಧು ವಾಸವಿದ್ದರು. ಸದರಿ ಕಿರಗಸೂರು ಊರು, ನಮ್ಮ ಊರಿನಿಂದ ಎಷ್ಟು ದೂರದಲ್ಲಿದೆ ಎಂದು ನನಗೆ ತಿಳಿದಿಲ್ಲ.
2. ಮಧು ತೀರಿಕೊಂಡ ದಿನ, ನಾನು ಹಸು ಮೇಯಿಸಲು ಹೋಗಿದ್ದೆನು, ನಮ್ಮ ಮನೆಯಲ್ಲಿ ಯಾರು ಇರಲಿಲ್ಲ. ಆಗ ಮಧು ಮನೆಯಲ್ಲಿ ಗಲಾಟೆಯಾಗಿತ್ತು. ಜನ ಸೇರಿದ್ದರು, ಏನು ಗಲಾಟೆ ಎಂದು ನಾನೂ ಸಹ ಅಲ್ಲಿಗೆ ಹೋದೆನು. ಆಗ ಸಮಯವು ಸುಮಾರು ಮಧ್ಯಾಹ್ನ 12.00 ಆಗಿತ್ತು.
3. ಗಲಾಟೆಯಾದ ದಿನ ಜನ ಸೇರಿದ್ದಾಗ ಮಧು ತೀರಿಕೊಂಡ ವಿಚಾರ ನನಗೆ ಗೊತ್ತಾಗಿತ್ತು. ಮಧು, ಆಕೆಯ ಮನೆಯಲ್ಲಿ ನೇಣು ಹಾಕಿಕೊಂಡು ತೀರಿಕೊಂಡಳೆಂದು ನನಗೆ ಗೊತ್ತಾಗಿರುತ್ತದೆ.

ನಾನು, ಮಧುವಿನೊಂದಿಗೆ ಮಾತನಾಡುತ್ತಿರಲಿಲ್ಲ. ಆಕೆ ತೀರಿಕೊಂಡ ದಿನ ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಬಾಗಿಲು ತೊಳೆಯುತ್ತಿದ್ದಾಗ, ಆಕೆಯನ್ನು ನೋಡಿದ್ದೆನು. ಆಕೆ ನನ್ನೊಂದಿಗೆ ಮಾತನಾಡುತ್ತಿರಲಿಲ್ಲ. ಆಕೆ ನನ್ನ ಜೊತೆ ಏನೂ ಹೇಳಿಲ್ಲ. ಆಕೆಯ ಮದುವೆಯಲ್ಲಿ ನಾನು ಭಾಗವಹಿಸಿಲ್ಲ. ಮಧುವಿನ ಮನೆಯವರು, 1 ನೇ ಆರೋಪಿಗೆ ಏನು ನೀಡಿದ್ದರೆಂದು ನನಗೆ ತಿಳಿದಿಲ್ಲ.

4. ಶವ ಪರೀಕ್ಷೆ ಮಾಡಿದ ನಂತರ ಮಧುವಿನ ಶವವನ್ನು ನಾನು ನೋಡಿರುತ್ತೇನೆ. ಮಧು ನೇಣು ಹಾಕಿಕೊಳ್ಳುವ ವಿಚಾರದಲ್ಲಿ, ಆಕೆಯ ಗಂಡನ ವಿರುದ್ಧ ಪ್ರಕರಣ ದಾಖಲಾಗಿರುವುದು ಗೊತ್ತಾಗಿರುತ್ತದೆ. ಪೊಲೀಸರು ವಿಚಾರಿಸಿದಾಗ ನಮಗೇನು ಗೊತ್ತಿಲ್ಲ ಎಂದು ಹೇಳಿದ್ದೆನು.

5. ನನಗೆ ತಿಳಿದಂತೆ, 1 ನೇ ಆರೋಪಿ ಮತ್ತು ಮಧುರವರ ಸಂಬಂಧ ಚೆನ್ನಾಗಿತ್ತು. ಸದರಿ ಮಧು ಆತ್ಮಹತ್ಯೆ ಮಾಡಿಕೊಳ್ಳಲು ಏನು ಕಾರಣ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

6. ಮಧುರವರ ಮದುವೆಯಾದ ನಂತರ 4 ವರ್ಷಗಳ ಕಾಲ ಮಾತ್ರ ಆಕೆಯನ್ನು ಆರೋಪಿತರು ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸಾಕ್ಷಿಯು, ಚೆನ್ನಾಗಿ ನೋಡಿಕೊಂಡಿದ್ದರು ಎಂದು ನುಡಿಯುತ್ತಾರೆ. ನಂತರ 1 ನೇ ಆರೋಪಿಯು, ತನ್ನ ತಂದೆಗೆ ಸೇವೆ ಮಾಡುತ್ತಿಲ್ಲವೆಂದು ನೆಪ ಮಾಡಿಕೊಂಡು, ಮಧು ಮಾಲಿನಿಗೆ ಬೈಯುವುದು ಹೊಡೆಯುವುದು ಮಾಡುತ್ತಿದ್ದನೆಂದು, ಮಧು ಮಾಲಿನಿ ನನ್ನ ಜೊತೆ ಹೇಳುತ್ತಿದ್ದಳು ಎಂದರೆ ಸರಿಯಲ್ಲ. ಕೆಲವೊಮ್ಮೆ 1 ನೇ ಆರೋಪಿಯು, ಮಧು ಮಾಲಿನಿಗೆ ಕೂಗಾಡಿ ಬೈಯುವುದು ನಮಗೆ ಕೇಳಿಸುತ್ತಿತ್ತು ಎಂದರೆ ಸರಿಯಲ್ಲ. ಮಧು ಮಾಲಿನಿಯು, ಅವರ ಮನೆಯಲ್ಲಿ ಯಾರೂ ಇಲ್ಲದೇ ಇದ್ದಾಗ, 1 ನೇ ಆರೋಪಿಯು, ಮಧು ಮಾಲಿನಿಗೆ, ತನಗೆ ಹಣ ಬೇಕು, ವರದಕ್ಷಿಣೆ ಕೇಳುವಾಗ 1 ಲಕ್ಷ ಹಣ ಕೇಳಿದ್ದೆ, ನಿಮ್ಮ ಮನೆಯವರು ಹಿಂದುಳಿದು ಸಹಾಯ ಮಾಡುತ್ತೇವೆ ಎಂದು ಹೇಳಿದ್ದರು, ಈಗ ತೆಗೆದುಕೊಂಡು ಬಾ, ಚಿನ್ನದ ಒಡವೆಗಳನ್ನು ಮಾಡಿಸಿಕೊಂಡು ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿ, ಆಕೆಯನ್ನು ತವರು

ಮನೆಗೆ ಕಳುಹಿಸುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆ ರೀತಿ, ಆಕೆ ತವರು ಮನೆಗೆ ಹೋದಾಗ, ಆಕೆಯ ತವರು ಮನೆಯವರು ಸಾಲ ಮಾಡಿ ರೂ.50,000/- ಹಣ ಮತ್ತು ಚಿನ್ನದ ಉಂಗುರದ ಒಡವೆಗಳನ್ನು ಮಾಡಿಸಿಕೊಟ್ಟು ಕಳುಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೂ ಸಹಮಧು ಮಾಲಿನಿಗೆ , ಆರೋಪಿತರು ನಿಮ್ಮಪ್ಪನ ಮನೆಯಿಂದ ಹಣ ತೆಗೆದುಕೊಂಡು, ಒಡವೆ ಮಾಡಿಸಿಕೊಂಡು ಬರುವಂತೆ ಹೊಡೆಯುವುದು, ಬೈಯುವುದು ಮಾಡಿ, ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಧು ಮಾಲಿನಿರವರ ತಂದೆ ತಾಯಿ ಬಂದು, 2 ರಿಂದ 3 ಬಾರಿ ಆರೋಪಿತರಿಗ ತಿಳುವಳಿಕೆ ಹೇಳಿ ಹೋದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆದರೂ ಸಹ, ಆರೋಪಿತರು, ಮಧು ಮಾಲಿನಿಗೆ ತೊಂದರೆ ಕೊಡುವುದನ್ನು ನಿಲ್ಲಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ, ಮಧು ಮಾಲಿನಿಯ ತವರು ಮನೆಯವರು, ಮದುವೆಯಾಗಿ 2 ಮಕ್ಕಳಾಗಿವೆ, ನ್ಯಾಯ ಪಂಚಾಯ್ತಿ ಮಾಡಿಸಿದರೆ, ಅದರ ಕೋಪದಲ್ಲಿ ನಿನ್ನ ಗಂಡ ಮತ್ತು ಮಾವ ಮತ್ತಷ್ಟು ತೊಂದರೆ ಕೊಡಬಹುದು, ಅನುಸರಿಸಿಕೊಂಡು ಹೋಗು ಎಂದು ಸಮಾಧಾನ ಪಡಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಇಷ್ಟಾದರೂ ಸಹ, ಆರೋಪಿತರು, ಮಧು ಮಾಲಿನಿಗೆ ಮತ್ತಷ್ಟು ವರದಕ್ಷಿಣೆ ಹಣ ಮತ್ತು ಚಿನ್ನದ ಒಡವೆ ತರುವಂತೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡಿ, ನಿಮ್ಮಪ್ಪನ ಮನೆಯಿಂದ ಹಣ ತರದೇ ಇದ್ದರೆ, ನೀನು ಬದುಕಿರುವ ಬದಲು ಸಾಯುವುದು ಲೇಸು, ನೀನು ಸತ್ತು ಹೋಗು ಎಂದು ಹೇಳಿ ಕಿರುಕುಳ ನೀಡುತ್ತಿದ್ದರೆಂದು, ಮಧು ಮಾಲಿನಿ ,ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ.

7. ದಿಃ 01.10.2020 ರಂದು ಮಧು ಮಾಲಿನಿಯು, ರಾತ್ರಿ ವೇಳೆಯಲ್ಲಿ ಜೋರಾಗಿ ಕೂಗಿಕೊಂಡು ಅಳುತ್ತಿರುವ ಶಬ್ದ ಕೇಳಿ, ಅವರ ಮನೆಯ ಬಳಿ ಹೋದಾಗ, ಮಧು ಮಾಲಿನಿಯು, ಅಳುತ್ತಾ ಮನೆಯಿಂದ ಹೊರ ಓಡಿ ಬಂದಿದ್ದು ಆಕೆಯನ್ನು ಸಮಾಧನಾ ಮಾಡಿ ಕೇಳಿದಾಗ , 1 ನೇ ಆರೋಪಿಯು ತನ್ನ ಮೇಲೆ ವಿನಾಕಾರಣ ಜಗಳ ತೆಗೆದು, ತನ್ನನ್ನು ಎಳೆದಾಡಿ, ಮೈಮೇಲೆ ಗುದ್ದಿ, ಕೆಳಕ್ಕೆ ಕೆಡವಿ, ಕಾಲಿನಿಂದ ಒದ್ದು ಏಟು ಮಾಡಿರುತ್ತಾನಂದು ಆಕೆ ಹೇಳಿದಾಗ, ನಾನು ಆಕೆಯನ್ನು ನೋಡಿದಾಗ, ಆಕೆಯ ಮೈ ಕೈ ಮತ್ತು ಇತರೆ ಕಡೆ ಏಟಾಗಿತ್ತು ಎಂದರೆ ಸರಿಯಲ್ಲ. ನಂತರ ಮಧು ಮಾಲಿನಿಗೆ ಆಕೆಯ ತಂದೆ ತಾಯಿಗೆ ತಿಳಿಸುವಂತೆ ಹೇಳಿದ್ದೆನೆ ಎಂದರೆ ಸರಿಯಲ್ಲ.

8. ದಿಃ 04.10.2020 ರಂದು ಬೆಳಿಗ್ಗೆ ಮಧು ಮಾಲಿನಿಯ ಮನೆಯಿಂದ ಜೋರಾದ ಜಗಳದ ಶಬ್ದ ಕೇಳಿಸುತ್ತಿತ್ತು ಎಂದರೆ ಸರಿಯಲ್ಲ. ಅದೇ ದಿನ ಬೆಳಿಗ್ಗೆ ಸುಮಾರು 10.45 ರಿಂದ 11.00 ಗಂಟೆ ಸಮಯದಲ್ಲಿ ಮಧುಮಾಲಿನಿ, ಅವರ ಮನೆ ಮುಂದೆ ಬಟ್ಟೆ ತೊಳೆಯುತ್ತಿದ್ದಳು ಎಂದರೆ ಸಾಕ್ಷಿಯು ಆ ಸಮಯದಲ್ಲಿ ತಾನು ಇರಲಿಲ್ಲ ಎಂದು ನುಡಿಯುತ್ತಾರೆ. ಸ್ವಲ್ಪ ಹೊತ್ತಿನಲ್ಲಿ 1 ನೇ ಆರೋಪಿಯು ಜೋರಾಗಿ ಕೂಗಿಕೊಂಡು, ಮಧು ಮಾಲಿನಿ ನೇಣು ಹಾಕಿಕೊಂಡಿದ್ದಾಳೆ ಎಂದು ಕೂಗಿಕೊಂಡನು ಎಂದರೆ, ಸಾಕ್ಷಿಯು ನಾನು ನೋಡಿಲ್ಲ ಎಂದು ಹೇಳುತ್ತಾರೆ. ನಂತರ, ನಾನು ಹೋಗಿ ನೋಡಿದಾಗ, ಮಧು ಮಾಲಿನಿ ನೇಣು ಹಾಕಿಕೊಂಡಿದ್ದು, ನಂತರ ಚಾಸಾ.6 ರವರ ಸಹಾಯದಿಂದ 1 ನೇ ಆರೋಪಿಯು, ಆಕೆಯನ್ನು ನೇಣಿನಿಂದ ಕೆಳಗೆ ಇಳಿಸಿ ಮಳವಳ್ಳಿ ಸರ್ಕಾರಿ ಆಸ್ಪತ್ರೆ ಗೆ ಕರೆದುಕೊಂಡು ಹೋದನು ಎಂದರೆ ನಾನು ನೋಡಿಲ್ಲ. ಆ ನಂತರದಲ್ಲಿ, ಮಧು ಮಾಲಿನಿ ತೀರಿಕೊಂಡ ವಿಚಾರ ಗೊತ್ತಾಯಿತು ಎಂದರೆ ಸರಿ.

9. ಆರೋಪಿತರು, ಮಧು ಮಾಲಿನಿಗೆ, ಆಕೆಯ ತವರು ಮನೆಯಿಂದ ಹಣ, ಒಡವೆ ಪಡೆದುಕೊಂಡು ಬರುವಂತೆ ನಿರಂತರವಾಗಿ ಮಾನಸಿಕ ಮತ್ತು ದೈಹಿಕ ಕಿರಕುಳ ನೀಡುತ್ತಾ, ಹಣ ತರಲು ಆಗದೇ ಇದ್ದರೆ ಸತ್ತು ಹೋಗು ಎಂದು ಹೇಳಿದ್ದರಿಂದ, ಆಕೆ ಹ ಹಿಂಸೆ ತಾಳಲಾರದೇ ಆತ್ಮಹತ್ಯೆಗೆ ಪ್ರಚೋದನೆಗೊಂಡು ನೇಣು ಹಾಕಿಕೊಂಡಳು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ.

10. ದಿಃ 08.10.2020 ರಂದು ಪೊಲೀಸರು ವಿಚಾರಣೆ ಮಾಡಿದಾಗ, ಸದರಿ ವಿಚಾರಗಳನ್ನು ನಾನು ಹೇಳಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ '' ನಂತರದಲ್ಲಿ ಹೊನ್ನಯ್ಯ ರವರು ಮಧುಮಾಲಿನಿ ಅಲಿಯಾಸ್ ಮಾಲಿನಿಯು ತನಗೆ ಸಂಸಾರದಲ್ಲಿ ಉಟೋಪಚಾರ ನೋಡಿಕೊಳ್ಳುತ್ತಿಲ್ಲ, ನನ್ನ ಸೇವೆ ಮಾಡುತ್ತಿಲ್ಲವೆಂದು ತನ್ನ ಮಗ ನಿತೀಶನಿಗೆ ಹೇಳಿಕೊಂಡಿದ್ದರಿಂದ ನಿತೀಶ್ ಕುಮಾರನು ತನ್ನ ಹೆಂಡತಿ ಮಾಲಿನಿಗೆ ತನ್ನ ತಂದೆಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಆತನಿಗೆಸೇವೆ ಮಾಡುವಂತೆ ನೆಪ ಮಾಡಿಕೊಂಡು ಬೈಯ್ಯುವುದು ಕೈಯಿಂದ ಹೊಡೆಯುತ್ತಿದ್ದ ಬಗ್ಗೆ ಮಧುಮಾಲಿನಿ ಅಲಿಯಾಸ್ ಮಾಲಿನಿ ನಮ್ಮ ಬಳಿ ಹೇಳಿಕೊಳ್ಳುತ್ತಿದ್ದಳು. ಒಮ್ಮೊಮ್ಮೆ ನಿತೀಶ್ ಕುಮಾರನು ಮಾಲಿನಿಗೆ ಜೋರಾಗಿ ಕೂಗಾಡಿ ಬೈಯುವುದು ನಮಗೆ ಕೇಳಿಸುತ್ತಿತ್ತು. ಒಂದು ದಿವಸ ಮಾಲಿನಿಯು ಅವರ ಮನೆಯಲ್ಲಿ ಯಾರು ಇಲ್ಲದಾಗ ಗಂಡ ನಿತೀಶ್ ಕುಮಾರನು ನನಗೆ ಹಣ ಬೇಕು ವರದಕ್ಷಿಣೆ ಕೇಳುವಾಗ ನಾನು ಒಂದು ಲಕ್ಷ ಹಣ ಕೇಳಿದ್ದೆಚೆ ನಿಮ್ಮಪ್ಪನ ಮನೆಯವರು

ಕೊಡಲು ಒಪ್ಪಿಕೊಳ್ಳದೇ ಹಿಂದುಳಿದು ಸಹಾಯ ಮಾಡುತ್ತೇವೆ ಎಂದು ಹೇಳಿದ್ದರು ಈಗ ಹೊೀಗಿ ಈಸಿಕೊಂಡು ಬಾ ಜೊತಗೆ ಮತ್ತಷ್ಟು ಚಿನ್ನದ ಒಡವೆಗಳನ್ನು ಮಾಡಿಸಿಕೊಂಡು ತೆಗೆದುಕೂಂಡು ಬಾ ಎಂದು ಕಿರುಕುಳ ನೀಡಿ ನಮ್ಮ ತವರು ಮನೆಗೆ ಕಳಿಸುತ್ತಿದ್ದ. ನಾನು ನನ್ನತವರು ಮನೆಗೆ ಹೋಗಿ ಈ ರೀತಿ ಹೇಳಿದಾಗ, ನಮ್ಮ ತಂದೆ ತಾಯಿಗಳು ಹೋದಾಗಲೆಲ್ಲ ಅವರಿವರ ಬಳಿ ಸಾಲ ಸೋೀಲ ಮಾಡಿ ಇದುವೆರೆಗೆ 50,000/- ರೂ. ವರೆಗೆ ಹಣ ಮತುಜ್ತ ಚಿನ್ನದ ಉಂಗುರದ ಒಡವೆಗಳನ್ನು ಮಾಡಿಸಿ ಕೊಟ್ಟು ನೀನು ಚೆನ್ನಾಗಿರು ಮಗಳೇ ಎಂದು ಹೇಳಿ ಕಳಿಸಿಕೊಡುತ್ತಿದ್ದರು. ಈ ರೀತಿ ಹಲವಾರು ಬಾರಿ ನಡೆದಿದೆ. ಇಷ್ಟಾದ್ದರೂ ನನ್ನ ಗಂಡ ನಿತೀಶ್ ಕುಮಾರ್ ಮತ್ತು ನನ್ನ ಮಾವ ಹೊನ್ನಯ್ಯ ರವರಿಗೆ ಹಣದ ದಾಹತೀರದೇ ಮತ್ತೆ ಮತ್ತೆ ನನಗೆ ನಿಮ್ಮಪ್ಪನ ಮನೆಯಿಂದ ಹಣ ಈಸಿಕೊಂಡು ಒಡವೆ ಮಾಡಿಸಿಕೊಂಡುಡ ಬರುವಂತೆ ಹೊಡೆಯುವುದು , ಬೈಯುವುದು ಮಾಡಿ ಮಾನಸಿಕ ಮತ್ತು ದೈಹಿಕ ಹಿಂಸೆ ನ ನೀಡುತ್ತಿದ್ದರು. ಈ ಬಗ್ಗೆ ನಾನು ನಮ್ಮ ತಂದೆ ತಾಯಿ ಬಳಿ ಹೇಳಿಕೊಂಡೆ. 2-3 ಬಾರಿ ನಮ್ಮ ತಂದೆ ಮತ್ತು ನನ್ನ ತಮ್ಮ ಬಂದು ನನ್ನ ಗಂಡ ಮತ್ತು ಮಾವನಿಗೆ ನನಗೆ ತೊಂದರೆ ಕೊಡದಂತೆ ತಿಳುವಳಿಕೆ ಹೇಳಿ ಹೋದರು. ಆದರೂ ನನ್ನ ಗಂಡ ಮತ್ತು ಮಾವ ನನಗೆ ತೊಂದರೆ ಕೊಡುವುದು ನಿಲ್ಲಿಸಲಿಲ್ಲ. ಈ ವಿಚಾರವಾಗಿ ನನ್ನ ತವರು ಮನೆಯವರು ಮದುವೆ ಆಗಿ 2 ಮಕ್ಕಳು ಆಗಿವೆ ಈಗ ನ್ಯಾಯ ಪಂಚಾಯ್ತಿ ಮಾಡಿಸಿದರೆ, ಅದರ ಕೋಪದಲ್ಲಿ ನಿನ್ನ ಗಂಡ ಮತ್ತು ಮಾವ ನಿನಗೆ ಮತ್ತಷ್ಟು ತೊಂದರೆ ಕೊಡಬಹುದು, ಅನುಸರಿಸಿಕೊಂಡು ಹೋಗು ಎಂದು ಹೇಳುತ್ತಾರೆ ಏನು ಮಾಡೋದು ಗಂಡ ಮತ್ತು ಮಾವನ ಕಾಟ ತಾಳಲಾಗುತ್ತಿಲ್ಲವೆಂದು ಹೇಳಿಕೊಂಡಳು. ಅದಕ್ಕೆ ನಾನು ಇವೆಲ್ಲ ಇದ್ದಿದ್ದೆ ಮುಂದೆ ಸರಿ ಹೋಗುತ್ತೆ ಅನುಸುರಿಸಿಕೊಂಡು ಹೋಗು ಎಂದು ಸಮಾಧಾನ ಹೇಳಿದೆ. ಆದಾದ ಮೇಲು ಸಹ ಹಲವಾರು ಬಾರಿ ಮಧುಮಾಲಿನಿ ಅಲಿಯಾಸ್ ಮಾಲಿನಿಯ ಗಂಡ ನಿತೀಶ್ ಕುಮಾರ್ ಮತ್ತು ಅವರ ತಂದೆ ಹೊನ್ನಯ್ಯ ಇಬ್ಬರು ಮಧುಮಾಲಿನಿಗೆ ನಿಮ್ಮ ತಂದೆ ಮನೆಯಿಂದ ಮತ್ತಷ್ಟು ವರದಕ್ಷಿಣೆ ಹಣ ಮತ್ತು ಚಿನ್ನದ ಒಡವೆ ತರುವಂತೆ ಮಾನಸಿಕವಾಗಿ - ದೈಹಿಕವಾಗಿ ಕಿರುಕುಳ ನೀಡಿ, ನೀನು ನಿಮ್ಮಪ್ಪನ ಮನೆಯಿಂದ ಹಣ ತರದಿದ್ದರೆ ನೀನು ಬದುಕಿರುವ ಬದಲು ಸಾಯುವುದೇ ಲೇಸು, ನೀನು ಸತ್ತು ತ ಹೋಗು ಎಂದು ಹೇಳಿ ಕಿರುಕುಳ ನೀಡುತ್ತಿದ್ದಾರೆ ಎಂದು ಮಧುಮಾಲಿನಿ ಅಲಿಯಾಸ್ ಮಾಲಿನಿಯು ನನಗೆ ಹೇಳಿಕೊಂಡಿದ್ದು, ದಿನಾಂಕಃ 10.10.2020 ರಂದು ರಾತ್ರಿ ವೇಳೆಯಲ್ಲಿ ಮಧುಮಾಲಿನಿಯ ಮನೆಯಲ್ಲಿ ಜೋರಾಗಿ ಕೂಗಿಕೊಂಡು ಅಳುತ್ತಿರುವ

ಶಬ್ದ ಕೇಳಿ ನಾನು ಮಧುಮಾಲಿನಿಯ ಮನೆಯ ಬಳಿ ಹೋದಾಗ ಮಧುಮಾಲಿನಿ ಅಳುತ್ತಾ ಮನೆಯ ಒಳಗಿನಿಂದ ಹೊರಕ್ಕೆ ಓಡಿ ಬಂದಳು. ನಾನು ಸಮಾಧಾನ ಮಾಡಿ ಕೇಳಿದಾಗ ಮಧುಮಾಲಿನಿ ನನ್ನ ಜೊತೆ ನನ್ನ ಗಂಡ ವಿನಃ ಕಾರಣ ನನ್ನ ಮೇಲೆ ಜಗಳ ತೆಗೆದು ನನ್ನನ್ನು ಎಳೆದಾಡಿ ನನ್ನ ಮೈ ಮೇಲೆ ಕೈಯಿಂದ ಗುದ್ದಿ ಕೆಳಕ್ಕೆ ಕೆಡವಿ, ಕಾಲಿನಿಂದ ಒದ್ದುಏಟು ಮಾಡಿರುತ್ತಾನೆಂದು ಹೇಳಿದಾಗ ನಾನು ನೋಡಲಾಗಿ ಮಧುಮಾಲಿನಿಯ ಮೈ ಕೈ ಮೇಲೆ, ಇತರೆ ಕಡೆಗಳಲ್ಲಿ ಏಟಾಗಿತ್ತು. ನಂತರ ನಾನು ಈ ವಿಷಯವನ್ನು ನಿಮ್ಮ ತಂದೆ ತಾಯಿಗೆ ತಿಳಿಸು ಎಂದು ಮಧುಮಾಲಿನಿಯನ್ನು ಸಮಾಧಾನ ಮಾಡಿ ಮನೆಗೆ ಕಳುಹಿಸಿದೆ,. ದಿಃ 04.10.2020 ರಂದು ಬೆಳಿಗ್ಗೆ ಮಧುಮಾಲಿನಿಯ ಮನೆಯಲ್ಲಿ ಜೋರಾಗಿ ಜಗಳ ನಡೆಯುತ್ತಿದ್ದು, ಜಗಳದ ಸದ್ದು ಹೊರಗಡೆ ಕೇಳಿಸುತ್ತಿತ್ತು. ಅದೇ ದಿನ ಬೆಳಿಗ್ಗೆ ಸುಮಾರು 10.45 ರಿಂದ 11.00 ಗಂಟೆಯಲ್ಲಿ ಮಧುಮಾಲಿನಿ ರವರ ಮನೆಯ ಮುಂದೆ ಬಟ್ಟೆ ತೊಳೆಯುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲೆ ಮಧುಮಾಲಿನಿಯ ಗಂಡ ನಿತೀಶ್ ಕುಮಾರ್ ನು ಮಧುಮಾಲಿನಿಯು ನೇಣು ಹಾಕಿಕೊಂಡಿದ್ದಾಳೆ ಎಂದು ಜೋರಾಗಿ ಕೂಗಿಕೊಂಡಾಗ ನಾನು ಮತ್ತು ಇತರರು ಹೋಗಿ ನೋಡಿದೆವು . ಮಧು ಮಾಲಿನಿ ಯು ನೇಣು ಬಿಗಿದುಕೊಂಡಿದ್ದಳು. ನಿತೀಶ್ ಕುಮಾರ್ ನು ತುನೀಲ್ ನ ಸಹಾಯದಿಂದ ನೇಣಿನಿಂದ ಕಏಳಗಿಳಿಸಿ ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಧುಮಾಲಿನಿ ಸತ್ತು ಹೋದಳೆಂದು ಗೊತ್ತಾಯಿತು. ಮಧುಮಾಲಿನಿಗೆ ಅವಳ ಗಂಡ ನಿತೀಶ್ ಕುಮಾರ ಮತ್ತು ಮಾವ ಹೊನ್ನಯ್ಯ ರವರು ಪದೇ ಪದೇ ನಿಮ್ಮಪ್ಪನ ಮನೆಯಿಂದ ಹಣ, ಒಡವೆ ಈಸಿಕೊಂಡು ಬರುವಂತೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಾ , ಹಣ ತರಲು ಆಗದಿದ್ದರೆ ಸತ್ತು ಹೋಗು ಎಂದು ಹೇಳಿದ್ದರಿಂದ ಆಕೆಯು ಹಿಂಸೆ ಕಿರುಕುಳ ತಾಳಲಾರದೇ ಆತ್ಮಹತ್ಯೆಗೆ ಪ್ರಚೋದನಗೊಂಡು ತನ್ನ ಮನೆಯಲ್ಲಿ ನೇಣಣು ಬಿಗಿದುಕೊಂಡವಳನ್ನು ನಿತೀಶ್ ಕುಮಾರ್ ನು ಮಳವಳ್ಳಿ ಆಸ್ಪತ್ರೆ ಗೆ ಕರೆದುಕೊಂಡು ಹೋಗುವಾಗ ಸತ್ತು ಹೋಗಿರುವುದಾಗಿರುತ್ತದೆ. ಮಧುಮಾಲಿನಿಯ ಸಾವಿಗೆ ನಿತೀಶ್ ಕುಮಾರ್ ಮತ್ತು ಆತನ ತಂದೆ ಹೊನ್ನಯ್ಯ ರವರೇ ಕಾರಣರಾಗಿರುತ್ತಾರೆ. '' ಎಂಬ ಭಾಗವನ್ನು ಓದಿ ಹೇಳಿದ್ದು , ಸಾಕ್ಷಿಯು ನಿರಾಕರಿಸಿದ್ದರಿಂದ, ಸದರಿ ಹೇಳಿಕೆಯ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು . ಆರೋಪಿತರ ನಿರಂತರ ಕಿರುಕುಳದಿಂದ ಮಧುಮಾಲಿನಿ ನೇಣು ಹಾಕಿಕೊಂಡಿರುವುದು ನನಗೆ ತಿಳಿದಿದ್ದರೂ ಸಹ ಆರೋಪಿತರು ನಮ್ಮ ಪಕ್ಕದ

ಮನೆಯವರಾದುದರಿಂದ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2 ಆರೋಪಿತರ ಪರವಾಗಿ ಶ್ರೀ ಎಂ ಎಂ ವಕೀಲರಿಂದಃ**

1 ಮತ್ತು 2 ಆರೋಪಿತರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.